



# ನಿನಗಿದೋ ನುಡಿನಮನ

**ಎಂ. ಬಿ. ಪಾಟೀಲರದ್ದು ಎಂದೂ ಅಳಿಯದಂತಹ ನೆನಪು. ಕಲೆಯನ್ನು ಆಸ್ವಾದಿಸುವ ಮನಸ್ಸುಗಳಲ್ಲಿ ಅವರ ಕಲ್ಪನಾಲೋಕದ ಕೃತಿಗಳು ಸದಾ ಹಸಿರು.**

■ **ಜೋಗ**

**ಕ**ರ್ನಾಟಕ ಕಂಡ ಅಪರೂಪದ, ಅಪಾರ ಅನುಭವದ, ಸಂಸ್ಕೃತಿ, ಪರಂಪರೆ, ಗ್ರಾಮೀಣ ಸೊಗಡಿನ ಚಿತ್ತಾರದ ಅನನ್ಯ ಕಲಾವಿದ ಮಲ್ಲಿಕಾರ್ಜುನಗೌಡ ಭೀಮನಗೌಡ ಪಾಟೀಲ. ಇತ್ತೀಚೆಗೆ ತಮ್ಮ 78ನೇ ವಯಸ್ಸಿನಲ್ಲಿ ಇನ್ನಿಲ್ಲವಾದ ಎಂ.ಬಿ.ಪಾಟೀಲರು, ಕೊನೆಯವರೆಗೂ ಚಿತ್ರಕಲೆಯನ್ನೇ ಉಸಿರಾಗಿಸಿಕೊಂಡು ವರ್ಣ ಸಾಗರದಲ್ಲಿ ಮುಳುಗಿ ಹೋದವರು. 'ಕುಂಚ' ಅವರ 'ಕೋವಿ'ಯಾಗಿತ್ತು. ಕಲಾಸಮರದ ಸೋಲರಿಯದ ಯೋಧನಂತೆ ಮೃತ್ಯುವಿನ ಆಹ್ವಾನವಿದೆ ಎಂದು ತಿಳಿದಿದ್ದರೂ, ಮೂಗಿನಲ್ಲಿ 'ಆಕ್ಸಿಜನ್' ನಳಿಕೆ ಸಿಕ್ಕಿಸಿಕೊಂಡು, ಹಾಸಿಗೆ ಮೇಲೆ ಪವಡಿಸಿದ್ದರೂ ಎದೆಯ ಮೇಲೆ 'ರಟ್' ಇಟ್ಟುಕೊಂಡು ಚಿತ್ರ ಬಿಡಿಸುತ್ತಿದ್ದ ಕಲಾರಾಧಕ ಈ ಪಾಟೀಲರು.

ನಾವೀನ್ಯಪೂರ್ಣ ಕಲ್ಪನೆಗಳ ನಡುವೆ ಕುಂಚದಲ್ಲಿ ಪಲ್ಲವಿಸುತ್ತಿದ್ದ ಅವರ ಕೃತಿಗಳನ್ನು ನೋಡಿದ ಯಾರೇ ಆಗಲಿ ಮರುಳಾಗದೇ ಇರುತ್ತಿರಲಿಲ್ಲ. ಚಿತ್ರಕಲೆಯ ವಿವಿಧ ಪ್ರಕಾರಗಳನ್ನು ಓತಪ್ರೋತವಾಗಿ ಚಿತ್ರಿಸುತ್ತಿದ್ದ ಅವರು 'ಪೋರ್ಟ್‌ರೇಟ್', 'ಮುರಲ್ಸ್' 'ಫಿಗರೇಟಿವ್' (ಸಾಂಕೇತಿಕ, ಲಾಕ್ಷಣಿಕ), ಜಲವರ್ಣದ 'ಲ್ಯಾಂಡ್‌ಸ್ಕೇಪ್ (ರಮ್ಯನೋಟ, ದೃಶ್ಯಾವಳಿ)ಗಳಲ್ಲಿ ನಿಷ್ಣಾತರೆನಿಸಿದ್ದರು. ಎಂಥತ್ತರ ಹೆಬ್ಬಾಗಿಲಿನಲ್ಲಿದ್ದರೂ ಅರಳು –ಮರಳು ಅವರ ಬಳಿ ಸುಳಿದಿರಲಿಲ್ಲ. ಚೈತನ್ಯ, ಹುರುಪು, ಸಾಮಾಜಿಕ ಕಳಕಳಿಯ ಚಿಂತನೆ ಎಳ್ಳಷ್ಟೂ ಬತ್ತಿರಲಿಲ್ಲ. ತಮ್ಮ ಗುರುಗಳು ಹಾಸಿಗೆ ಹಿಡಿದಿದ್ದಾರೆಂದು ಅರಿತ ಸಾಹಿತಿ, ಕಲಾವಿದರು, ಪತ್ರಕರ್ತರು, ನಾಟಕಕಾರರು, ಸಿನಿಮಾ ವಲಯದ ಸಂಗಾತಿಗಳು ಅವರನ್ನು ಗಾಬರಿಯಿಂದ ಭೆಟ್ಟಿಯಾಗಲು ಬಂದರು. ಬಂದವರು ತಾವೇ ಗಾಬರಿಯಾಗಿ ಶೀಘ್ರ ಗುಣಮುಖವಾಗಿರೆಂದು ಹಾರೈಸಿ ಹಿಂತಿರುಗುತ್ತಿದ್ದರು. ಯಾಕೆಂದರೆ ಬಂದವರನ್ನೆಲ್ಲ ಗುರುತು ಹಿಡಿದು ಅವರೊಂದಿಗಿದ್ದ ದಿನಗಳ ನೆನಪಿನ ಬುತ್ತಿಯನ್ನು ಪಾಟೀಲರು ಬಿಚ್ಚುತ್ತಿದ್ದರು. ಆತ್ಮೀಯರ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಅದೇ ಕಂಚಿನ ಕಂಠದೊಂದಿಗೆ ಹಳೆಯ ಘಟನೆಗಳನ್ನು ಮೆಲುಕು ಹಾಕಿ ನಗಿಸಿ ಕಳಿಸುತ್ತಿದ್ದರು.

ಅಸ್ವಸ್ಥರಾಗಿ ಹಾಸಿಗೆಯಲ್ಲಿದ್ದಾಗಲೂ ಅವರು, 'ಚಿತ್ರಕಲೆ ಜೀವಂತವಾಗಿರುವಂತೆ ನೋಡಿಕೊಳ್ಳಿ. ಕಂಪ್ಯೂಟರ್, ವಾಟ್ಸಾಪ್ ಮುಂತಾದವುಗಳನ್ನು ನಾನು ಸಹಿಸುವದಿಲ್ಲ. ಕಲೆಯನ್ನು ಯಾಂತ್ರಿಕತೆಯಿಂದ ದೂರವಿಡಿ. ಅದು ಹರಿಯುವ ನದಿಯಾಗಿರಲಿ. ನಿಂತ ನೀರಾಗಿಸಿ ಚರಂಡಿ ಸೇರಿಸಬೇಡಿ' ಎಂದು ಶಿಷ್ಯರಿಗೆ ತಿಳಿಹೇಳುತ್ತಿದ್ದವರು ಪಾಟೀಲರು. 'ನೀವಾರಾ ಏನ ಮಾಡ್ತೀರಿ? ಕಾಲದ ಓಟಕ್ಕ ಹೆಜ್ಜಿ ಹಾಕ್ತೀರಿ. ವೇಗದ ತಾಳಕ್ಕೆ ತಕ್ಕಂತೆ ಕುಣಿತೀರಿ, ಸಂತಿಗೆ ಮೂರು ಮಳಾ ನೇಯ್ತೀರಿ' ಎಂದು ತಿವಿಯುತ್ತಲೂ ಇದ್ದರು.